# ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರ
# ಕೋಲಾರ



# 2021-2022 ನೇ ಸಾಲಿನ
# ವಾರ್ಷಿಕ ವರದಿ

# ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರದ 2021-2022 ನೇ ಸಾಲಿನ ವಾರ್ಷಿಕ ವರದಿ.
# ದಿನಾಂಕ : 01-04-2021 ರಿಂದ 31-03-2022.

## 1. ಪೀಠಿಕೆ

ಸರ್ಕಾರದ ಅಧಿಸೂಚನೆಯ ಸಂಖ್ಯೆ : ವನಇ 181 ಟಿಟಿಪಿ 88 ದಿನಾಂಕ : 15-04-1988 ರಲ್ಲಿ ರಚಿಸಿದನ್ವಯ ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರವು ದಿನಾಂಕ : 17-06-1988 ರಿಂದ ಕಾರ್ಯಾಚರಣೆಗೆ ಬಂದಿರುತ್ತದೆ.

**ಪ್ರಾಧಿಕಾರದ ಉದ್ದೇಶಗಳು:**

**"ಯೋಜನೆ, ಉತ್ತೇಜಿಸುವುದು ಹಾಗೂ ನಗರ ಪ್ರದೇಶದ ಅಭಿವೃದ್ಧಿಯನ್ನು ಭದ್ರಪಡಿಸುವುದು."** ಈ ಉದ್ದೇಶಕ್ಕಾಗಿ ಪ್ರಾಧಿಕಾರವು ಕೆಳಕಂಡ ಅಧಿಕಾರ ಹೊಂದಿರುತ್ತದೆ.

- ಪ್ರಾಧಿಕಾರದ ವ್ಯಾಪ್ತಿಯಲ್ಲಿ ನಗರ ಪ್ರದೇಶದ ಒಳಗೆ ಅಥವಾ ಹೊರಗಿನಲ್ಲಿ, ಚಲಿಸಬಲ್ಲ, ಸ್ಥಿರ ಆಸ್ತಿಗಳನ್ನು ಸ್ವಾಧೀನಪಡಿಸಿಕೊಳ್ಳಲು, ಹಿಡಿದುಕೊಳ್ಳಲು, ನಿರ್ವಹಿಸಲು ಹಾಗೂ ವಿಲೇವಾರಿ ಮಾಡುವ ಅಧಿಕಾರ ಹೊಂದಿರುತ್ತದೆ.
- ಕಟ್ಟಡ ಇಂಜನಯರಿಂಗ್ ಮತ್ತು ಇತರ ಕಾರ್ಯಾಚರಣೆಗಳನ್ನು ನಿರ್ವಹಿಸಲು ಅಧಿಕಾರ ಹೊಂದಿರುತ್ತದೆ.
  ಸಾಮಾನ್ಯವಾಗಿ ಅಭಿವೃದ್ಧಿಯ ಉದ್ದೇಶಕ್ಕಾಗಿ ಅಗತ್ಯವಿರುವ ಎಲ್ಲಾ ಕೆಲಸಗಳನ್ನು ಮಾಡುವ ಅಧಿಕಾರ ಹೊಂದಿರುತ್ತದೆ.

## 2. ಆಡಳಿತಾತ್ಮಕ ರಚನೆ

ಈ ಕೆಳಕಂಡ ಅಧ್ಯಕ್ಷರು : ಸದಸ್ಯರುಗಳನ್ನು ಸರ್ಕಾರವು ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ನೇಮಿಸಿದೆ.

**ಶ್ರೀಯುತರು :-**

| | | |
|---|---|---|
| 1 | **ಶ್ರೀ ಆರ್.ವೆಂಕಟಾಚಲಪತಿ,**<br>ಅಧ್ಯಕ್ಷರು, ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರ, ಕೋಲಾರ.<br>ದಿನಾಂಕ: 19/06/2020 ರಿಂದ ತಹಲ್‌ವರೆವಿಗೂ | ಅಧ್ಯಕ್ಷರು |
| 2 | **ಶಾಸಕರು,**<br>ಕೋಲಾರ ವಿಧಾನ ಸಭಾ ಕ್ಷೇತ್ರ,ಕೋಲಾರ. | ಸದಸ್ಯರು |
| 3 | **ಜಿಲ್ಲಾಧಿಕಾರಿಗಳು,**<br>ಕೋಲಾರ ಜಿಲ್ಲೆ, ಕೋಲಾರ. | ಸದಸ್ಯರು |
| 4 | **ಆರಕ್ಷಕ ಅಧೀಕ್ಷಕರು,**<br>ಕೋಲಾರ ಜಿಲ್ಲೆ, ಕೋಲಾರ | ಸದಸ್ಯರು |
| 5 | **ಆಯುಕ್ತರು,**<br>ನಗರಾಭಿವೃದ್ಧಿ ಪ್ರಾಧಿಕಾರ, ಕೋಲಾರ. | ಸದಸ್ಯರು |
| 6 | **ನಗರ ಯೋಜನಾ ಸದಸ್ಯರು,**<br>ನಗರಾಭಿವೃದ್ಧಿ ಪ್ರಾಧಿಕಾರ,ಕೋಲಾರ. | ಸದಸ್ಯರು |

| | | |
|---|---|---|
| 7 | **ಕಾರ್ಯಪಾಲಕ ಅಭಿಯಂತರರು,**<br>ಲೋಕೋಪಯೋಗಿ, ಬಂದರು ಮತ್ತು ಒಳನಾಡು<br>ಜಲಸಾರಿಗೆ ಇಲಾಖೆ, ಕೋಲಾರ | ಸದಸ್ಯರು |
| 8 | **ಪೌರಾಯುಕ್ತರು,**<br>ನಗರಸಭೆ, ಕೋಲಾರ | ಸದಸ್ಯರು |
| 9 | **ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು,**<br>ಕೋಲಾರ ಜಿಲ್ಲೆ, ಕೋಲಾರ | ಸದಸ್ಯರು |
| 10 | ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ<br>ಮಂಡಳಿಯ ಪ್ರತಿನಿದಿ. | ಸದಸ್ಯರು |
| 11 | ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ<br>ನಿಯಮಿತದ ಪ್ರತಿನಿದಿ. | ಸದಸ್ಯರು |
| 12 | ವಾಸ್ತುಶಿಲ್ಪಿ ತಜ್ಞರು, | ಸದಸ್ಯರು |
| 13 | ನಗರಸಭೆ ಸದಸ್ಯರು, (ನಾಮ ನಿರ್ದೇಶಿತ),<br>ನಗರಸಭೆ, ಕೋಲಾರ. | ಸದಸ್ಯರು |
| 14 | **ಶ್ರೀ ಎಂ.ನಾರಾಯಣಸ್ವಾಮಿ (ಅಪ್ಪಿ)** | ನಾಮ ನಿರ್ದೇಶಿತ ಸದಸ್ಯರುಗಳು |
| **15** | **ಶ್ರೀ ಸತ್ಯನಾರಾಯಣ್‌ರಾವ್ ಪಿ.ಎಸ್.,** | |
| **16** | **ಶ್ರೀ ಆರ್.ಮುರಗೇಶ್,** | |
| **17** | **ಕು.ಮಮತಕುಮಾರಿ** | |

**3. ಈವರೆಗಿನ ಪ್ರಗತಿ**

**ಟಮಕ 1ನೇ ಹಂತದ ಅಭಿವೃದ್ಧಿ ಯೋಜನೆ :–**

ಟಮಕ 1ನೇ ಹಂತದ ವಸತಿ ಯೋಜನೆಯಲ್ಲಿ 121 ಎಕರೆ 03 ಗುಂಟೆ ಜಮೀನನ್ನು ಅಭಿವೃದ್ಧಿ ಪಡಿಸಲು ರೂ.5.24 ಕೋಟಿಗಳಿಗೆ ಸರ್ಕಾರವು ತನ್ನ ಆದೇಶ **ಸಂಖ್ಯೆ: ವನಇ 532 ಎಂಐಬಿ 92 ದಿ:26-08-92** ರಂದು ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿದೆ ಹಾಗೂ ಸರ್ಕಾರವು ಆದೇಶ ಸಂಖ್ಯೆ : ವನಇ 96, ಬೆಂಗಳೂರು ದಿನಾಂಕ:28-04-1997 ರಂದು ಟಮಕ 1ನೇ ಹಂತದ ಯೋಜನೆಯನ್ನು ಅಭಿವೃದ್ಧಿ ಪಡಿಸಲು ಪರಿಷ್ಕೃತ ರೂ 6.595 ಕೋಟಿಗಳಿಗೆ ಸರ್ಕಾರದ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿದ್ದು. ಈ ಯೋಜನೆಯಲ್ಲಿ ಕೆಲವು ರಸ್ತೆ, ವಿದ್ಯುತ್ ಮತ್ತು ನೀರು ಸರಬರಾಜು ಕಾಮಗಾರಿಗಳನ್ನು 1997 ರಿಂದ 2000-01 ರ ವರವಿಗೆ ನಿರ್ವಹಿಸಿದ್ದು, ಉಳಿದ ಕಾಮಗಾರಿಗಳಾದ ರಸ್ತೆ, ಮೂಲಭೂತ ಸೌಕರ್ಯ, ವಿದ್ಯುದ್ದೀಕರಣ, ನೀರು ಸರಬರಾಜು ಇತರೆ, ಉಳಿಕೆ ಕಾಮಗಾರಿಗಳನ್ನು ಪ್ರಾಧಿಕಾರವು ಪೂರ್ಣಗೊಳಿಸಲು ಪ್ರಯತ್ನಿಸುತ್ತಿದೆ. ಈ ವಸತಿ ಯೋಜನೆಯಲ್ಲಿ ಒಟ್ಟು 1080 ನಿವೇಶನಗಳನ್ನು ಹಂಚಿಕೆ ಮಾಡಿದ್ದು, ಉಳಿಕೆ ಮೂಲೆ ನಿವೇಶನ ಮತ್ತು ಬಿಡಿ ನಿವೇಶನಗಳನ್ನು ಬಡಾವಣೆಯಲ್ಲಿ ನಾಗರೀಕ ಸೌಲಭ್ಯಗಳಾದ ರಸ್ತೆ. ನೀರುಸರಬರಾಜು ಹಾಗೂ ವಿದ್ಯುತ್ ಸಂಪರ್ಕ ನೀಡಿದ ನಂತರ ಹಂಚಿಕೆ ಮಾಡಲಾಗುವುದು. ಈ ಯೋಜನೆಯಲ್ಲಿನ ಬಾಕಿ ಅಭಿವೃದ್ಧಿಕಾರ್ಯಗಳನ್ನು ಪೂರ್ಣಗೊಳಿಸುತ್ತಿದ್ದಂತೆ ಬಡಾವಣೆಯಲ್ಲಿನ ಉಳಿಕೆ ನಿವೇಶನಗಳಿಗೆ ಹೆಚ್ಚಿನ ಮೌಲ್ಯ ಲಭ್ಯವಾಗುತ್ತದೆ. ಈ ಕೆಳಕಂಡ ನಿವೇಶನಗಳು ಬಾಕಿ ಇದ್ದು, ಇದರಿಂದ ಬರುವ ಆದಾಯದಿಂದ ಹೊಸಯೋಜನೆಯನ್ನು ರೂಪಿಸಬಹುದು.

| | | | |
|---|---|---|---|
| 1) | ಬಿಡಿ ನಿವೇಶನಗಳ ಸಂಖ್ಯೆ: | 110 | 120000000–00 |
| 2) | ಅನಿಯಮಿತ ನಿವೇಶನ ಸಂಖ್ಯೆ: | 91 | 80000000–00 |
| 3) | ಮೂಲೆ ನಿವೇಶನಗಳ ಸಂಖ್ಯೆ: | 144 | 120000000–00 |
| 4) | ಸಿ.ಎ ನಿವೇಶನಗಳ ಸಂಖ್ಯೆ: | 11 | 100000000–00 |
| 5) | ವಾಣಿಜ್ಯ ನಿವೇಶನಗಳ ಸಂಖ್ಯೆ: | 08 | 110000000–00 |
| | | **ಒಟ್ಟು** | **53,00,00,000–00** |

ಈ ಮೇಲ್ಕಂಡ ನಿವೇಶನಗಳ ಬೆಲೆಯು ಈಗಿನ ಮಾರುಕಟ್ಟೆ ದರ ಪಟ್ಟಿಯಂತೆ ಚದರ ಅಡಿಗೆ ರೂ 740/– ರಂತೆ ಲೆಕ್ಕಹಾಕಲಾಗಿದೆ ಹರಾಜಿನಲ್ಲಿ 740/– ರೂಗಳಿಗೂ ಮೇಲ್ಪಟ್ಟು ಬಿಡ್ ಮಾಡುವ ಸಂಭವವಿದ್ದು ಇನ್ನೂ ಹೆಚ್ಚಿನ ಆಧಾಯವನ್ನು ನಿರೀಕ್ಷಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ ನಾಗರೀಕ ಸೌಲಭ್ಯ ನಿವೇಶನಗಳನ್ನು ಈ ಕೆಳಕಂಡಂತೆ ಹಂಚಿಕೆ ಮಾಡಲಾಗಿರುತ್ತದೆ.

ಅ) ವಾಣಿಜ್ಯ ತೆರಿಗೆ ಸಹಾಯಕ ಆಯುಕ್ತರು, ಎಲ್.ವಿ.ಓ–180, ಕೋಲಾರ ರವರ ಕಛೇರಿ ನಿರ್ಮಾಣಕ್ಕಾಗಿ 3035.00 ಚ.ಮೀಟರ್ ಅಳತೆಯ ನಾಗರೀಕ ನಿವೇಶನ ಹಂಚಿಕೆ ಮಾಡಲಾಗಿದೆ.

ಆ) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿ., ಕೋಲಾರ ರವರ ಕಛೇರಿ ನಿರ್ಮಾಣಕ್ಕಾಗಿ 2875.00 ಚ.ಮೀಟರ್ ಅಳತೆಯ ನಾಗರೀಕ ನಿವೇಶನ ಹಂಚಿಕೆ ಮಾಡಲಾಗಿದೆ.

ಇ) ವ್ಯವಸ್ಥಾಪಕ ನಿರ್ದೇಶಕರು, ಡಾ॥ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಕೋಲಾರ ರವರ ಕಛೇರಿ ನಿರ್ಮಾಣಕ್ಕಾಗಿ 500.00 ಚ.ಮೀಟರ್ ಅಳತೆಯ ನಾಗರೀಕ ನಿವೇಶನ ಹಂಚಿಕೆ ಮಾಡಲಾಗಿದೆ.

ಈ) ಜಿಲ್ಲಾ ನೋಂದಣಾಧಿಕಾರಿಗಳು, ಕೋಲಾರ ಜಿಲ್ಲೆ, ಕೋಲಾರ ರವರ ಕಛೇರಿ ನಿರ್ಮಾಣಕ್ಕಾಗಿ 500.00 ಚ.ಮೀಟರ್ ಅಳತೆಯ ನಾಗರೀಕ ನಿವೇಶನ ಹಂಚಿಕೆ ಮಾಡಲಾಗಿದೆ. ಕೋಲಾರ ಇವರಿಗೆ ಹಂಚಿಕೆ ಮಾಡಲಾಗಿದೆ.

ಉ) ಬಾಬು ಜಗಜೀವನ ರಾಂ ಭವನ ನಿರ್ಮಾಣಕ್ಕಾಗಿ ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಕೋಲಾರ ಭವನ ನಿರ್ಮಾಣಕ್ಕಾಗಿ 2000.00 ಚ.ಮೀಟರ್ ಅಳತೆಯ ನಾಗರೀಕ ಸೌಲಭ್ಯ ನವೇಶನ ಹಂಚಿಕೆ ಮಾಡಲಾಗಿದೆ.

ಊ) ಹಿರಿಯ ಉಪನಿರ್ದೇಶಕರು, ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ, ಕೋಲಾರ ರವರ ಕಛೇರಿ ನಿರ್ಮಾಣಕ್ಕಾಗಿ 600.85 ಚ.ಮೀಟರ್ ಅಳತೆಯ ನಾಗರೀಕ ನಿವೇಶನ ಹಂಚಿಕೆ ಮಾಡಲಾಗಿದೆ

ಋ) ಹಿರಿಯ ಭೂ ವಿಜ್ಞಾನ ಇಲಾಖೆ, ಕೋಲಾರ ಜಿಲ್ಲೆ, ಕೋಲಾರ ರವರ ಕಛೇರಿ ನಿರ್ಮಾಣಕ್ಕಾಗಿ 374.00 ಚ.ಮೀಟರ್ ಅಳತೆಯ ನಾಗರೀಕ ನಿವೇಶನ ಹಂಚಿಕೆ ಮಾಡಲಾಗಿದೆ.

ಎ) ಕರ್ನಾಟಕ ವಕ್ಫ್ ಬೋರ್ಡ್‌ಗೆ 262.05 ಚ.ಮೀ ಅಳತೆಯ ನಾಗರೀಕ ನಿವೇಶನ ಹಂಚಿಕೆ ಮಾಡಲಾಗಿದೆ.

ಏ) ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಕಛೇರಿಗೆ ನಿರ್ಮಾಣಕ್ಕಾಗಿ 353.47 ಚ.ಮೀಟರ್ ಅಳತೆಯ ನಾಗರೀಕ ನಿವೇಶನ ಹಂಚಿಕೆ ಮಾಡಲಾಗಿದೆ.

ಐ) ಬೋವಿ ಜನಾಂಗದ ಸಮುದಾಯ ಭವನಕ್ಕಾಗಿ 1399.95 ಚ.ಮೀಟರ್ ಅಳತೆಯ ನಾಗರೀಕ ನಿವೇಶನ ಹಂಚಿಕೆ ಮಾಡಲಾಗಿದೆ.

ಪ್ರಾಧಿಕಾರವು ಒಟ್ಟು ಸುಮಾರು 45.00ಕೋಟಿಯಷ್ಟು ಆದಾಯವನ್ನು ನಿರೀಕ್ಷಿಸಿದ್ದು ಇದರಿಂದ ಒಂದು ಹೊಸ ವಸತಿ ಯೋಜನೆಯನ್ನು ರೂಪಿಸಲು ಸಮರ್ಥವಾಗಿರುತ್ತದೆ.

**4. ಸಂಪನ್ಮೂಲಗಳ ಕ್ರೂಡಿಕರಣ**

1. ಬೇಡಿಕೆ, ವಸೂಲಿ ಮತ್ತು ಬಾಕಿ ಪಟ್ಟಿ (ಡಿ.ಸಿ.ಬಿ)– ಅನ್ವಯಿಸುವುದಿಲ್ಲ
2. ಮುನಸಿಪಾಲಿಟಿ ನಿಧಿ– ಅನ್ವಯವಾಗುವುದಿಲ್ಲ

## 2021–22ರ ಆಯವ್ಯಯ

| ಕ್ರ.ಸಂ. | ವಿಷಯಗಳು | ವಿವರಗಳು | |
|---|---|---|---|
| 1 | 2021–22ನೇ ಸಾಲಿನ ಆಯವ್ಯಯ | **2021–2022 ನೇ ಸಾಲಿನ ಅಯವ್ಯಯ ಅಂದಾಜು 01-04-2021 ರಿಂದ 31-03-2022 ರವರೆಗೆ ಅಂದಾಜು ಆದಾಯ** | |
| | | ಉತ್ತಮತೆ, ಶೇ. 15 ರಷ್ಟು ಭೂ ಪರಿವರ್ತನಾ ಶುಲ್ಕ, ಅಭಿವೃದ್ಧಿ ಶುಲ್ಕ ಬ್ಯಾಂಕಿನಿಂದ ಬಂದ ಬಡ್ಡಿ, ತೆರಿಗೆ ಪ್ರಾರಂಭಿಕ ಪ್ರಮಾಣ ಪತ್ರ ಇತ್ಯಾದಿಗಳಿಂದ ಬರುವ ಅಂದಾಜು ಆದಾಯ | 128224207/– |
| | | ನಿವೇಶನಗಳಿಂದ ಬರಲಿರುವ ಅಂದಾಜು ಆದಾಯ | 562084500/– |
| | | **ಒಟ್ಟು** | **690308707/-** |
| | | **01-04-2021 ರಿಂದ 31-03-2022 ರವರೆಗೆ ಅಂದಾಜು ಖರ್ಚು** | |
| | | 1) ಸಾಮಾನ್ಯ ವಿಭಾಗದಿಂದ ಅಂದಾಜು ಖರ್ಚು | 55362000/– |
| | | 2) ಬಂಡವಾಳ ವಿಭಾಗದಿಂದ ಅಭಿವೃದ್ಧಿ ಯೋಜನೆ ಮತ್ತು ಕೊಳಚೆಸೆಸ್ ಮತ್ತು ಇತರೆ ಅಂದಾಜು ಖರ್ಚು | 612020000/– |
| | | **ಒಟ್ಟು ಖರ್ಚು** | **667382000/-** |
| | | | |
| | | **01-04-2021 ರಿಂದ 31-03-2022 ರವರೆಗೆ ವಾಸ್ತವಿಕ ಆದಾಯ** | |
| | | 1) ಪ್ರಾರಂಭಿಕ ಶುಲ್ಕ | 87164049/– |
| | | 2) ಉತ್ತಮತೆ ಬೆಟರ್‌ಮೆಂಟ್, ತೆರಿಗೆ ಬಡ್ಡಿ ಇತ್ಯಾದಿಗಳಿಂದ ಬಂದ ಹಣ | 10978035/– |
| | | **ಒಟ್ಟು** | **98142084/-** |
| | | 3) ನಿಗಧಿತ ಠೇವಣಿ (ಹಿಂದಿನ ಠೇವಣಿ ಹಣ ಮುಂದುವರೆಸಿ) | 885610866/– |
| | | **ಒಟ್ಟು** | **183752950/-** |
| | | **01-04-2021 ರಿಂದ 31-03-2022 ರವರೆಗೆ ವಾಸ್ತವಿಕ ಖರ್ಚು** | |
| | | 1) ಸಾಮಾನ್ಯ ವಿಭಾಗದಿಂದ | 4784035/– |
| | | 2) ಬಂಡವಾಳ ವಿಭಾಗದಿಂದ | 4989149/– |
| | | **ಒಟ್ಟು ಖರ್ಚು** | **9773184/-** |
| | | **ದಿನಾಂಕ: 31-03-2022ಕ್ಕೆ ಅಖೈರು ಶುಲ್ಕ** | **173979766/-** |

**5. ಭೌತಿಕ ಪ್ರಗತಿ**

**ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಕೈಗೊಂಡಿರುವ ಕಾಮಗಾರಿ ವಿವರಗಳು**

| ಕ್ರಮ ಸಂಖ್ಯೆ | ವಿವರ | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | ಷರಾ |
|---|---|---|---|
| 1 | ಟಮಕ ವಸತಿ ಬಡಾವಣೆಯಲ್ಲಿರುವ ಮೈದಾನ ಮತ್ತು ಉದ್ಯಾನವನವನ್ನು ಅಭಿವೃದ್ಧಿಪಡಿಸುವ ಕಾಮಗಾರಿ | 46.65 | ಲೋ.ಬ ಮತ್ತು ಒ.ಜ.ಸಾ ಇಲಾಖೆ ವತಿಯಿಂದ ಠೇವಣಿ ದೇಣಿಗೆ ಮೂಲಕ ಕಾಮಗಾರಿ ನಿರ್ವಹಿಸಲಾಗಿದೆ. |
| 2 | ಟಮಕ ವಸತಿ ಬಡಾವಣೆಯ ಗದ್ದೆಕಣ್ಣೂರು ರಸ್ತೆಯ ಬಲಭಾಗದ 60.0ಅಡಿ ಅಗಲದ 1000 ಮೀಟರ್ ಉದ್ದದ ರಸ್ತೆಯ ಅಭಿವೃದ್ಧಿ ಕಾಮಗಾರಿ | 97.50 | ಲೋ.ಬ ಮತ್ತು ಒ.ಜ.ಸಾ ಇಲಾಖೆ ವತಿಯಿಂದ ಠೇವಣಿ ದೇಣಿಗೆ ಮೂಲಕ ಕಾಮಗಾರಿ ನಿರ್ವಹಿಸಲಾಗಿದೆ. |
| 3 | ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರದ ಟಮಕ ವಸತಿ ಬಡಾವಣೆಗೆ ವಿದ್ಯುತ್ ಸಂಪರ್ಕ ನೀಡುವುದು | 280.90 | ಲೋ.ಬ ಮತ್ತು ಒ.ಜ.ಸಾ ಇಲಾಖೆ ವತಿಯಿಂದ ಠೇವಣಿ ದೇಣಿಗೆ ಮೂಲಕ ಕಾಮಗಾರಿ ನಿರ್ವಹಿಸಲಾಗಿದೆ. |
| 4 | ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಕೋಲಾರ ನಗರದ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳಲ್ಲಿ ಬಸ್ ತಂಗುದಾಣ ನಿರ್ಮಾಣ ಕಾಮಗಾರಿ (05 ಸಂಖ್ಯೆ) | 42.50 | ಲೋ.ಬ ಮತ್ತು ಒ.ಜ.ಸಾ ಇಲಾಖೆ ವತಿಯಿಂದ ಠೇವಣಿ ದೇಣಿಗೆ ಮೂಲಕ ಕಾಮಗಾರಿ ನಿರ್ವಹಿಸಲಾಗುವುದು |
| 5 | ಟಮಕ ವಸತಿ ಬಡಾವಣೆಯ ನಿವಾಸಿಗಳಿಗೆ ಟ್ಯಾಂಕರ್ ಮೂಲಕ ಕುಡಿಯುವ ನೀರು ಸರಬರಾಜು ಮಾಡುವುದು(ಶಾಶ್ವತ ನೀರಿನ ಸಂಪರ್ಕ ಕಲ್ಪಿಸುವವರೆಗೆ) | 12.42 | ಪ್ರಗತಿಯಲ್ಲಿದೆ. |

**6. ಕಲ್ಯಾಣ ಕಾರ್ಯಕ್ರಮಗಳ ಪ್ರಗತಿ**

ಯಾವುದೇ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದಿಲ್ಲ.

**7. ವಿಶೇಷ ಸಾಧನೆ/ ಪ್ರಶಸ್ತಿ:**

ಪ್ರಾಧಿಕಾರದಲ್ಲಿ ಕರ್ನಾಟಕ ಸರ್ಕಾರದ ಇ–ಆಡಳಿತದ **ಹೆಚ್.ಆರ್.ಎಂ.ಎಸ್** ಹಾಗೂ **ಎನ್.ಪಿ.ಎಸ್** ಪದ್ಧತಿಯನ್ನು ಜಾರಿ ಮಾಡಲಾಗಿದೆ.

## 8. 2022-23ನೇ ವರ್ಷದ ಗುರಿ

1. ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರವು 2021-22ನೇ ಸಾಲಿನಲ್ಲಿ ಸಾರ್ವಜನಿಕರಿಗೆ ನಿವೇಶನ ವಿತರಣೆಗಾಗಿ ಹೊಸ ಯೋಜನೆಯನ್ನು ರೂಪಿಸಲು ಸಿದ್ಧವಾಗಿರುತ್ತದೆ. ಒಟ್ಟು 1900 ಅರ್ಜಿದಾರರು ನಿವೇಶನಗಳನ್ನು ಪಡೆಯಲು ನೊಂದಣಿ ಮಾಡಿಕೊಂಡು ನಿರೀಕ್ಷೆಯಲ್ಲಿರುತ್ತಾರೆ. ಒಟ್ಟು 2000 ನಿವೇಶನಗಳಿಗೆ ಬೇಡಿಕೆಯಿದ್ದು ಹಂತ ಹಂತವಾಗಿ ಯೋಜನೆಗಳನ್ನು ರೂಪಿಸಿ ನಿವೇಶನಗಳನ್ನು ವಿತರಿಸಲು ಪ್ರಾಧಿಕಾರವು ಉದ್ದೇಶಿಸಿರುತ್ತದೆ

2. ಪ್ರಾಧಿಕಾರದಿಂದ ಶ್ರೀ ಡಿ.ದೇವರಾಜ ಅರಸು ಬಡಾವಣೆಯಲ್ಲಿರುವ ಬ್ಲಾಕ್ ನಂ:02ರಲ್ಲಿ ಕಾಯ್ದಿರಿಸಿರುವ ವಾಣಿಜ್ಯ ಉಪಯೋಗದ ಜಾಗದಲ್ಲಿ ವಾಣಿಜ್ಯ ಮಳಿಗೆಗಳನ್ನು ಕಟ್ಟಲು ಕ್ರಮವಹಿಸಲಾಗುವುದು.

3. ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 208 ಬೆಂರೂಪ್ರಾ 2010 ದಿ: 09/08/2010. ಮಹಾಯೋಜನಾ ನಕ್ಷೆ (ಪ-1) ಅನುಮೋದಿಸಿದ್ದು, ಕೋಲಾರ ನಗರಕ್ಕೆ 30.00 ಮೀಟರ್ ಅಗಲದ ಸುಮಾರು 20.00 ಕಿ.ಮೀ ಉದ್ದದ ಹೊರ ವರ್ತುಲ ರಸ್ತೆ ಗುರುತಿಸಲಾಗಿದೆ. ಕೋಲಾರ ಪಟ್ಟಣದ ಸುತ್ತಮುತ್ತ ಕೈಗಾರಿಕಾ ಹಾಗೂ ವಾಣಿಜ್ಯ ಉದ್ದಿಮೆಗಳು ವ್ಯಾಪಕವಾಗಿ ಸ್ಥಾಪಿತವಾಗುತ್ತಿದ್ದು, ಇದರಿಂದ ನಗರದಲ್ಲಿ ವಾಹನಗಳ ದಟ್ಟಣೆ ಹೆಚ್ಚಾಗುತ್ತಿದೆ. ಕೋಲಾರ ನಗರವು ಚಿಕ್ಕಬಳ್ಳಾಪುರ-ಕೋಲಾರ, ಕೋಲಾರ-ಶ್ರೀನಿವಾಸಪುರ ರಾಜ್ಯ ಹೆದ್ದಾರಿ ಹಾಗೂ ಕೋಲಾರ-ಮಾಲೂರು ಜಿಲ್ಲಾ ಮುಖ್ಯ, ಕೋಲಾರ-ಬಂಗಾರಪೇಟೆ ರಸ್ತೆಗಳು ಸಂಪರ್ಕ ಹೊಂದಿದ್ದು, ಸದರಿ ರಸ್ತೆಗಳನ್ನು ತಲುಪಲು ವಾಹನಗಳು ನಗರದ ಒಳಭಾಗದಲ್ಲಿ ಪ್ರವೇಶಿಸುತ್ತಿರುವುದರಿಂದ, ನಗರದ ಒಳಭಾಗದಲ್ಲಿ ವಾಹನಗಳ ದಟ್ಟಣೆ ಅಧಿಕವಾಗುತ್ತಿದೆ. ಇದರಿಂದ ಅಪಘಾತಗಳು ಸಂಭವಿಸುವ ಸಂದರ್ಭಗಳಿದೆ. ಮಹಾಯೋಜನೆಯಲ್ಲಿ ಗುರುತಿಸಿರುವ 30.00 ಮೀಟರ್ ಅಗಲದ ಹೊರ ವರ್ತುಲ ರಸ್ತೆಯನ್ನು ರೂ.80.37 ಕೋಟಿಗೆ ಅಂದಾಜು ಪಟ್ಟಿಯನ್ನು ತಯಾರಿಸಿದ್ದು, ಈ ಪ್ರಸ್ತಾವನೆಯನ್ನು ಸರ್ಕಾರದ ಅನುಮೋದನೆಗೆ ಸಲ್ಲಿಸಿದ್ದು, ಸರ್ಕಾರದ ಅನುಮೋದನೆಯನ್ನು ಹಾಗೂ ಅನುದಾನವನ್ನು ನಿರೀಕ್ಷಿಸಲಾಗಿದ್ದು, ಈ ವರ್ತುಲ ರಸ್ತೆಯನ್ನು ಹಂತ ಹಂತವಾಗಿ ಅಭಿವೃದ್ಧಿಪಡಿಸಲು ಇಚ್ಛಿಸಿದ್ದು, ಮೊದಲನೇ ಹಂತದಲ್ಲಿ ರಾಷ್ಟ್ರೀಯ ಹೆದ್ದಾರಿ75 (ಬೆಂಗಳೂರು-ಚೈನ್ನೈ) ರಿಂದ ಶ್ರೀನವಾಸಪುರ ರಾಜ್ಯ ಹೆದ್ದಾರಿಗೆ. ಅಮ್ಮೇರಹಳ್ಳಿ, ಕೊಂಡರಾಜಹಳ್ಳಿ, ಸುಲ್ತಾನ್‌ತಿಪ್ಪಸಂದ್ರ, ಕೀಲುಕೋಟೆ, ವಿಭೂತಿಪುರ, ಖಾದ್ರಿಪುರ, ಸಂಗೊಂಡನಹಳ್ಳಿ, ಅರಹಳ್ಳಿ, ಕೋಡಿಕಣ್ಣೂರು ಗ್ರಾಮಗಳಲ್ಲಿ ಗುರುತಿಸಿರುವ 30.00 ಮೀಟರ್ ಅಗಲದ ರಸ್ತೆಯನ್ನು ಅಭಿವೃದ್ಧಿಪಡಿಸಲು, ಮೊದಲನೇ ಹಂತದಲ್ಲಿ 6.45 ಕಿ.ಮೀ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ.

4. ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರದ ಟಮಕ ವಸತಿ ಬಡಾವಣೆಗೆ ನೀರು ಸರಬರಾಜು ಮಾಡುವ ಕಾಮಗಾರಿಗೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿರವರು ರೂ. 426.00/- ಲಕ್ಷಗಳಿಗೆ ಅಂದಾಜು ಪಟ್ಟಿ ನೀಡಿದ್ದು, ಸದರಿ ಕಾಮಗಾರಿಯನ್ನು ಮುಂದಿನ ದಿನಗಳಲ್ಲಿ ನಿರ್ವಹಿಸಲು ಉದ್ದೇಶಿಸಲಾಗಿದೆ.

ಸಹಿ/-

**ಆಯುಕ್ತರು,**

**ನಗರಾಭಿವೃದ್ಧಿ ಪ್ರಾಧಿಕಾರ, ಕೋಲಾರ.**

# KOLAR URBAN DEVELOPMENT AUTHORITY

# KOLAR



# ANNUAL REPORT OF THE YEAR

# 2021-2022

# ANNUAL REPORT OF KOLAR URBAN DEVELOPMENT AUTHORITY, KOLAR FOR THE YEAR 2021-2022.
# (from 01-04-2021 TO 31-03-2022)

## 1. GENERAL

Government of Karnataka vide its notification No.HUD 181 TTP 88 dated 15-04-1988 has constituted Kolar Urban Development Authority. This authority started its functioning from 17-06-1988.

The object of KUDA is **"Planning, Promoting & Securing the Development of the Urban area".**

For these proposes, the authority shall have the power to;

- Acquire, hold, manage and dispose of moveable & immovable property, whether within or outside the urban area under its jurisdictions.
- To carry out Building, Engineering & other operations.
- And generally to do all things necessary or expedient for the purpose of such development for purposes incidental thereto.

## 2. ADMINISTRATIVE SETUP

The Government has nominated the chairman and the following members for the Kolar Urban Development Authority (KUDA), as detailed in section 3(3) of KUDA 1987.

**SRIYUTHS**

| | | |
|---|---|---|
| 1 | **Shri R.Venkatachalapathi**<br>Chairman<br>Kolar Urban Development Authority,<br>(Since 19-06-2020) | CHAIRMAN |
| 2 | MEMBER LEGISLATIVE ASSEMMBLY,<br>Kolar, | MEMBER |
| 3 | DEPUTY COMMISSIONERKolar Dist.<br>Kolar | MEMBER |
| 4 | SUPERINTENDENT OF POLICE<br>Kolar Dist. Kolar | MEMBER |
| 5 | COMMISSIONER,<br>Kolar Urban Development Authority,<br>Kolar. | Commissioner |

| | | |
|---|---|---|
| 6 | TOWN PLANNING MEMBER<br>Kolar Urban Development Authority,<br>Kolar. | Town Planning<br>MEMBER |
| 7 | EXECUTIVE ENGINEER<br>Public works, Ports & Inland water<br>Transport Department, Kolar. | Engineering<br>MEMBER |
| 8 | COMMISSIONER<br>City Municipality, Kolar | MEMBER |
| 9 | DIST. HEALTH OFFICER<br>Kolar Dist, Kolar. | MEMBER |
| 10 | REPRESENTATIVE from<br>Karnataka Urban Water Supply &<br>Sewage Board, Bethamangala, Kolar. | MEMBER |
| 11 | REPRESENTATIVE from<br>BESCOM, Kolar. | MEMBER |
| 12 | SPECIALIST IN ARCHITECTURE | MEMBER |
| 13 | A MEMBER from<br>City Municipality, Kolar | MEMBER |
| 14 | **Shri M.NARAYANASWAMY** | **MEMBER (Nominated)** |
| 15 | **Shri Sathyanarayanarao P.S.,** | |
| 16 | **Shri. R.Muragesh** | |
| 17 | **Ku. Mamatha Kumari,** | |

**3. UP TO DATE PROGRESS**

**a) TAMAKA 1$^{ST}$ STAGE DEVELOPMENT AUTHORITY SCHEME**

The Government by its order **No.HUD 532 MIB 92 dated 26-08-1992** have accorded administrative sanction to acquire 121.03 acres of land in different survey numbers of Tamaka Village, Kasaba Hobali, Kolar Taluk at an estimated cost of RS. 5.24 Crores. Later this cost has been revised and increased to RS 6.595 Crores by the Govt. vide its order No. HUD 96 Bangalore, dated 28-04-1997.

The KUDA from 1997 to 2000-2001 has under taken some of the civil works such as formation of Roads, providing of basic amenities like electricity, water supply etc, and has undertaken action to complete the remaining works.

In this layout, 1080 sites have been already allotted to the allotters. The vacant sites like corner and stray sites are proposed to be allotted after providing basic civic amenities in the layout.

In this financial year authority has planned to complete the remaining pending works. After completion of these works authority shall have good rates for the remaining vacant sites in the layout.

**The details of the vacant non allotted sites which are available in the layout & expected revenue which can be generated from the sale of these sites is as detailed below.**

| Sl.no | Type of sites | No.of sites | Expected Amount (in Rupees) |
|---|---|---|---|
| 1 | Stray sites | 110 | 12,00,00,000=00 |
| 2 | Odd sites | 91 | 8,00,00,000=00 |
| 3 | Corner Sites | 144 | 12,00,00,000=00 |
| 4 | C.A sites | 13 | 10,00,00,000=00 |
| 5 | Commercial sites | 8 | 11,00,00,000=00 |
| | **Total** | | **53,00,00,000=00** |

The above value is calculated by considering Rs.740/- (Guideline Value) per sq feet area. Actually during bidding we can expect higher rates than this estimated value. As a result, we shall get more amount than this expected value.

The following C.A., sites were allotted for establishment of offices.

1) 3035.89 mtr C.A., sites allotted to The Assistant Commissioner, Commercial tax, (L-V-o-180).
2) 2875. 00 sq mtr to The Managing Director, Karnataka Rural information Development Ltd.,
3) 500.00 Sq mtr to The Managing Director, Dr:: B.R. Ambedkar, Development
4) 500 Sq mtr to District Register, Department of stamps & Register, Kolar.
5) 2000 Sq mtr to Joint Director, social welfare department, for Babu Jagajeevan Ram Bhavana.
6) 600.00 Sq mtr to Senior Deputy Director, Local Audit circal, Karnataka state Accounts Department.
7) 374.00 Sq mtr to Senior Geologist, Miners geology Department.
8) 262.50 Sq.mtr to Karnataka Waqf Board.
9) 353.47 Sq.mtr to Backward Class and Minorities office, Kolar.
10) 1399.95 Sq.mtr to Joint Director, social welfare department for Bhovi Samudhaya Bhavan.

The KUDA is expected to get Rs.45.00 cores of income during this period. From this, KUDA will be self sufficient and financially strong enough to manage the office and to plan for the formation of a new layout.

**4. RESOURCES**

1. Demand Collection and Balance
   -Not Applicable
2. Municipal Fund
   -Not Applicable

**ANNUAL BUDGET OF THE YEAR 2021-22**

| | |
|---|---|
| **5. ESTIMATED BUDGET AND CORRESPONDING EXPENDITURE FOR THE YEAR 2021-2022** | |
| **Estimated Income from 01-04-2021 to 31-03-2022** | |
| 1. a) Betterment fee<br>b) Bank Interest<br>c) Scrutiny fee<br>d) Supervision charge<br>e) Taxes etc. | Rs. 128224207/- |
| 2) Capital Amount<br>Expected from the allotment of sites | 562084500/- |
| **TOTAL** | Rs. **690308707/-** |
| **Estimated Expenditure from 01-04-2021 to 31-03-2022** | |
| 1. General section | Rs. 55362000/- |
| 2. Capital Section | Rs. 612020000/- |
| Total | Rs. **667382000/-** |
| **Actual Income from 01-04-2021 to 31-03-2022** | |
| 1. Opening balance | Rs. 87164049/– |
| 2. a) Betterment fee<br>b) Bank Interest<br>c) Scrutiny fee<br>d) Supervision charge ,Taxes,Etc., | Rs. 10978035/- |
| TOTAL | Rs. **98142084/-** |
| 3. Bank Fixed Deposit (Including previous years) | Rs. 85610866/- |
| Total : | Rs. **183752950/-** |

| Actual Expenditure from 01-04-2021 to 31-03-2022 | | |
|---|---|---|
| 1. | General section | Rs. 4784035/- |
| 2. | Capital Section | Rs. 4989149/- |
| | Total | Rs. **9773184/-** |
| | CLOSING BALANCE (a-b) As on 31-03-2022 | Rs. **173979766/-** |

## 5. PHYSICAL PROGRESS

Works taken up by Kolar Urban Development Authority are as follows;

| Sl. no | Details | Estimated Amount (in lakh Rupees) | Remarks |
|---|---|---|---|
| 1 | Development of park and playground in Tamaka Residential Layout. | 46.65 | By Deposit contribution to PWP&IWTD department |
| 2 | Development of 60 feet road towards right side of Gaddekannuru road in Tamaka Residential layout. | 97.50 | By Deposit contribution to PWP&IWTD department |
| 3 | Electrification work in Tamaka layout of KUDA | 280.90 | By Deposit contribution to PWP&IWTD department |
| 4 | Development of Bus Shelters in State highway and MDR's (05 Nos) from KUDA | 42.50 | By Deposit contribution to PWP&IWTD department |
| 5 | Supply of day to day drinking water to residents of Tamaka Layout by tanker. (till permanent water supply network is provided) | 12.42 | In progress |

## 6. PROGRESS & WELFARE OF SC/ST & WOMEN MINORITES

No such schemes are planned by Urban Development Authority, Kolar.

## 7. Special Performance/ Awards

E-Governance programs of Government of Karnataka such as HRMS and NPS have been implemented in the Authority.

## 8. Targets for the Year 2021-22

1. Kolar Urban Development Authority is ready to develop new scheme in the year 2021-22. About 1900 applicants have registered to avail sites. There is demand for 2000 sites and the Authority is planning to provide sites by forming new layouts stage by stage.

2. It is proposed to construct commercial complex in Block-2, of Tamaka Layout in a site reserved for commercial purpose.

3. The Government has approved Revised Master plan Wide order No: ನಅಇ 208 ಬೆಂರೂಪ್ರಾ 2010. Dated: 09/08/2010. In the approved Master Plan (R-1) 30.00 Mtr vide Outer ring road is earmarked. Hence Authority is planning to develop earmarked outer ring road in stage wise. Therefore 6.45 K.M Stretch connecting from National highway-75 to Srinivasapur Road is selected. Which covers Ammerahally, Kondarajanahally, Keelukote, Veebuthipur, Khadripura, Sangondanahally, Arahally, Kodikannur Villages. The expected cost for Development of 6.45 K.m Ring road is around Rs.80.37 Crores Authority published preliminary notification and has submitted proposal for sanction of grant and approval of the Government.

4. KUWS&DB has submitted estimate for Rs.426.00 lakhs for providing of water supply network in the Tamaka Layout developed by KUDA. It is planned to execute the work in the coming days.

Sd/-

**COMMISSIONER**
**URBAN DEVELOPMENT**
**AUTHORITY, KOLAR**

# 2021-22ನೇ ಸಾಲಿನ ವಾರ್ಷಿಕ ವರದಿಯನ್ನು ಸಲ್ಲಿಸಲು ವಿಳಂಬವಾಗಿರುವುದಕ್ಕೆ ವಿವರಣೆ

| ವರ್ಷ | ವಾರ್ಷಿಕ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಬೇಕಾದ ಅವಧಿ | ವಿಳಂಬಕ್ಕೆ ಯಾವುದಾದರೂ ಕಾರಣಗಳು ಇದ್ದರೆ | ವಾರ್ಷಿಕ ವರದಿಯನ್ನು ಸಿದ್ದಪಡಿಸಲು ಪ್ರಾರಂಭಿಸಿದ ದಿನಾಂಕ ಹಾಗೂ ಮುಕ್ತಾಯ ದಿನಾಂಕ | ವಾರ್ಷಿಕ ವರದಿಯನ್ನು ಅಚ್ಚಿಗಾಗಿ ನೀಡಿದ ಮತ್ತು ಅಚ್ಚು ಪ್ರತಿಗಳನ್ನು ಸ್ವೀಕರಿಸಿದ ದಿನಾಂಕ | ಪ್ರತಿಗಳನ್ನು ಶಾಸಕಾಂಗ ಸಭೆಯಲ್ಲಿ ಮಂಡಿಸಲು ಸಚಿವಾಲಯಕ್ಕೆ ಸಲ್ಲಿಸಿದ ಪತ್ರದ ಉಲ್ಲೇಖ ಹಾಗೂ ದಿನಾಂಕ | ಪ್ರತಿಗಳನ್ನು ಶಾಸಕಾಂಗ ಸಭೆಯಲ್ಲಿ ಮಂಡಿಸಲು ಉಂಟಾದ ವಿಳಂಬಕ್ಕೆ ಕಾರಣಗಳು | ಷರಾ |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| 2021-22 | 02/04/2022 | ವಿಷಯ ನಿರ್ವಾಹಕರು ಇಲ್ಲದಿರುವುದರಿಂದ ಹಾಗೂ ವಾರ್ಷಿಕ ವರದಿ ಲಭ್ಯವಾಗಿಲ್ಲ ದಿರುವುದರಿಂದ ವಿಳಂಬವಾಗಿರುತ್ತದೆ | ಪ್ರಾರಂಭಿಸಿದ ದಿನಾಂಕ: 29-07-2022 ಪರಿವೀಕ್ಷಣೆಯ ಹಾಗೂ ಪೂರ್ಣಗೊಳಿಸಿದ ದಿನಾಂಕ : 11-08-2022 | ದಿನಾಂಕ : 02-06-2023 ಮತ್ತು ದಿನಾಂಕ : 05-07-2023 | ದಿನಾಂಕ : 06/07/2023 ರಂದು 2021-22ನೇ ಸಾಲಿನ ವಾರ್ಷಿಕ ವರದಿ 25 ಹಾರ್ಡ್ ಕಾಫಿ ಪ್ರತಿಗಳನ್ನು ಮತ್ತು 250 ಸಾಫ್ಟ್ (ಸಿ.ಡಿ) ಕಾಫಿ ಪ್ರತಿಗಳನ್ನು ಈ ಕಛೇರಿಯ ಪತ್ರದ ಸಂ : ಕೋನಪ್ರಾ : ಲೆಕ್ಕ ಪರಿಶೋಧನಾ ವರದಿ 1 : 2021-22 ರಂತೆ ಸರ್ಕಾರಕ್ಕೆ ಸಲ್ಲಿಸಲಾಗಿದೆ. | 2021-22 ನೇ ಸಾಲಿನ ಲೆಕ್ಕ ಪರಿಶೋಧನ ವರದಿಯನ್ನು ಕನ್ನಡ ಭಾಷೆಯಿಂದ ಆಂಗ್ಲ ಭಾಶೆಗೆ ತರ್ಜುಮೆ ಮಾಡಲು ಭಾಷಾಂತರ ಇಲಾಖೆಯಿಂದ ವಿಳಂಬವಾಗಿರುವುದರಿಂದ ಹಾಗೂ ಸಿಬ್ಬಂದಿಯ ಕೊರತೆಯಿಂದ ಹಾಗೂ ಮುದ್ರಣ ಮಾಡಲು ಕಾರ್ಯವು ವಿಳಂಬಗೊಂಡಿರುತ್ತದೆ. ಈ ವಿಳಂಬವನ್ನು ಮನ್ನಿಸಲು ವಿನಂತಿಸಿಕೊಳ್ಳಲಾಗಿದೆ. | - |

ಸಹಿ/-
ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರ, ಕೋಲಾರ.